ದಿನಾಂಕಃ **04-05-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು:ಆರೋಪಿ ಪರ ವಕೀಲರಾದ ಶ್ರೀ ಎಮ್.ಎ.ಎಚ್ ಅವರಿಂದ:

11) ಆರೋಪಿ ನನ್ನಿಂದ ಆಗಾಗ ರೂ.20,000/-, ರೂ.30,000/-, ರೂ.40,000/- ಹಾಗೂ ರೂ.70,000/- ಗಳಂತೆ ಹಣ ಪಡೆದುಕೊಂಡಿದ್ದ ಎನ್ನುವ ಕುರಿತು ದೂರಿನಲ್ಲಾಗಲಿ, ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಹಾಗೆ ನಾನು ಆರೋಪಿಗೆ ಆಗಾಗ ರೂ.20,000/-, ರೂ.30,000/-, ರೂ.40,000/- ಹಾಗೂ ರೂ.70,000/- ಗಳಂತೆ ಹಣ ಕೊಟ್ಟಿರುವ ಕುರಿತು ಆರೋಪಿಯ ಕಡೆಯಿಂದ ದಾಖಲೆಗಳನ್ನು ಬರೆಸಿಕೊಂಡಿರುತ್ತೀರಾ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿ ಒಂದು ಬಾಂಡ್ ಪೇಪರನಲ್ಲಿ ನನ್ನಿಂದ ಪಡೆದ ಹಣಗಳ ಕುರಿತು ಬರೆದುಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಬಾಂಡ್ ಪೇಪರನ್ನು ನಾನು ಈ ಪ್ರಕರಣದಲ್ಲಿ ಹಾಜರಪಡಿಸಿರುತ್ತೇನೆ. ಸದರಿ ಬಾಂಡ್ ಪೇಪರನ್ನು ನಾನು ನಿಪಿ.6 ರಂತೆ ಹಾಜರಪಡಿಸಿ ಗುರುತಿಸಿಕೊಂಡಿರುತ್ತೇನೆ.

12) ದಿ:10.06.2021 ಆರೋಪಿ ನನ್ನಿಂದ ರೂ.50,000/- ಹಣ ಪಡೆದುಕೊಂಡಿರುತ್ತಾನೆ ಎಂದು ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ರೂ.50,000/- ಪಡೆದಾದ ನಂತರ ಆರೋಪಿ ನಿಮ್ಮಿಂದ ಯಾವ ದಿನಾಂಕದಂದು ಎಷ್ಟು ಮೊತ್ತವನ್ನು ಪಡೆದುಕೊಂಡಿರುತ್ತಾನೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 15 ದಿನಕ್ಕೊಮ್ಮೆ ಮತ್ತು ತಿಂಗಳಿಗೊಮ್ಮೆ ಪುನ: ನನಗೆ ಬೇಟ್ಟಿಯಾಗಿ ನನ್ನಿಂದ ಹಣ ಪಡೆದುಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿಗೆ ನಾನು ರೂ.5,00,000/- ದವರೆಗೆ ಹಣ ನೀಡಿರುತ್ತೇನೆ ಎನ್ನುವ ಸಂಗತಿ ಆರೋಪಿ ನನಗೆ ನಿಪಿ.6 ರ ಬಾಂಡ್ ಮಾಡಿಕೊಟ್ಟ ದಿ:12.12.2022 ರಂದು ಗೊತ್ತಾಗಿರುತ್ತದೆ.

13) ದಿ:10.06.2021 ರಿಂದ ದಿ:12.12.2022 ರ ವರೆಗೆ ಆರೋಪಿ ನನ್ನಿಂದ ಪಡೆದ ಹಣವನ್ನು ಮರಳಿ ನೀಡಿರುವುದಿಲ್ಲ. ಆರೋಪಿ ನನ್ನಿಂದ ಪಡೆದ ಹಣವನ್ನು ದಿ:12.12.2022 ರ ನಂತರ ಎಷ್ಟು ಸಲ ಹಣ ಮರಳಿ ಕೇಳಿರುತ್ತೀರಿ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದಕ್ಕಿಂತ ಮೊದಲು 2-3 ಸಲ ಬೇಟ್ಟಿಯಾಗಿ ಹಣ ಕೇಳಿದ್ದೆ, ನಿಪಿ.6 ರ ಬಾಂಡ್ ಪೇಪರ್ ಬರೆದುಕೊಟ್ಟ ನಂತರವು ಸಹ 2-3 ಸಲ ಆರೋಪಿಗೆ ಬೇಟ್ಟಿಯಾಗಿ ಹಣ ಕೊಡಲು ಕೇಳಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

14) ಆರೋಪಿ ನನ್ನಿಂದ ರೂ.5,00,000/- ಗಳವರೆಗೆ ಹಣ ಪಡೆದುಕೊಂಡಿರುತ್ತಾನೆ ಎಂದು ತೋರಿಸಲು ನಾನು ನಿಪಿ.6 ರ ದಾಖಲೆಯನ್ನು ಹಾಜರಪಡಿಸಿರುತ್ತೇನೆ. ನಿಪಿ.6 ರ ದಾಖಲೆಯನ್ನು ಹೊರುತುಪಡಿಸಿ ನಾನು ಆರೋಪಿಗೆ ರೂ.5,00,000/- ಗಳವರೆಗೆ ಹಣ ನೀಡಿರುತ್ತೇನೆ ಎಂದು ತೋರಿಸಲು ನನ್ನ ಬಳಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ಆರೋಪಿ ನನಗೆ ಈ ಪ್ರಕರಣದ ಚೆಕ್ಕನ್ನು ದಿ:17.03.2023 ರಂದು ತನ್ನ ಮನೆಯ ಬಳಿ ಕರೆಸಿ ನನಗೆ ನೀಡಿರುತ್ತಾನೆ. ನಿಪಿ.1 ರ ಚೆಕ್ಕಿನಲ್ಲಿ ಬರೆದ ಬರವಣಿಗೆಯ ಶಾಹಿ ಮತ್ತು ಸಹಿಯ ಶಾಹಿ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ.1 ರ ಚೆಕ್ಕಿನಲ್ಲಿ ಬರೆದ ಬರವಣಿಗೆ ಆರೋಪಿಯದ್ದಲ್ಲಾ ಎಂದರೆ ಸಾಕ್ಷಿಯು ಬೇರೆ ಯಾರ ಕಡೆಯಿಂದಾದರು ಬರೆಸಿರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತ: ಮುಂದುವರೆದು ನಾನು ಆರೋಪಿಯ ಮನೆಗೆ ಹೋಗುವಷ್ಟರಲ್ಲಿ ಆರೋಪಿ ನಿಪಿ.1 ರ ಚೆಕ್ಕಿನಲ್ಲಿ ಬರೆದು ಸಹಿ ಮಾಡಿ ಇಟ್ಟಿದ್ದ ಎಂದು ನುಡಿಯುತ್ತಾರೆ. ಆರೋಪಿಗೆ ಇಂಗ್ಲೀಷ್ ಬರೆಯಲು ಮತ್ತು ಓದಲು ಬರುವುದಿಲ್ಲ ಎಂದರೆ ಸರಿಯಲ್ಲ.

15) ದೂರಿನಲ್ಲಾಗಲಿ, ನೋಟಿಸಿನಲ್ಲಾಗಲಿ, ನನ್ನ ಸ್ವ ಇಚ್ಛಾ ಹೇಳಿಕೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಾಗಲಿ ನಾನು ನಿಪಿ.1 ರ ಚೆಕ್ಕನ್ನು ಯಾವ ಬ್ಯಾಂಕಿನಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದ್ದೆ ಎಂದು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಗೋಕಾಕನಲ್ಲಿಯೇ ವಾಸವಾಗಿರುತ್ತೇನೆ ಎಂದರೆ ಸರಿ. ಆರೋಪಿಯ ಖಾತೆ ಇರುವ ಬ್ಯಾಂಕು ಸಹ ಗೋಕಾಕನಲ್ಲಿಯೇ ಇರುತ್ತದೆ ಎಂದರೆ ಸರಿ. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದ ಕಾರಣ ನಿಪಿ.1 ರ ಚೆಕ್ಕು ಅಮಾನ್ಯಗೊಂಡಿರುತ್ತದೆ. ದೂರಿನಲ್ಲಿ, ನೋಟಿಸಿನಲ್ಲಿ ಮತ್ತು ನನ್ನ ಸ್ವ ಇಚ್ಛಾ ಹೇಳಿಕೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಆರೋಪಿಯ ಬ್ಯಾಂಕಿನವರು ಮೆಮೊ ಕೊಟ್ಟ ನಂತರ ಚೆಕ್ಕು ಅಮಾನ್ಯಗೊಂಡಿರುವ ಕುರಿತು ಗೊತ್ತಾಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ.

16) ನಿಪಿ.1 ರ ಚೆಕ್ಕು ಅಮಾನ್ಯಗೊಂಡಾದ ನಂತರ ನಾನು ಆರೋಪಿಗೆ ಬೇಟ್ಟಿಯಾಗಿ ಚೆಕ್ಕು ಅಮಾನ್ಯಗೊಂಡಿರುವ ವಿಷಯವನ್ನು ತಿಳಿಸಿರುತ್ತೇನೆ. ಹಾಗೆ ನಾನು 2-3 ಸಲ ಆರೋಪಿಗೆ ಬೇಟ್ಟಿಯಾಗಿರುತ್ತೇನೆ. ಆರೋಪಿ ಮತ್ತು ನಾನು ಒಂದೇ ಓಣಿಯಲ್ಲಿ ವಾಸವಾಗಿರುವುದರಿಂದ ಕಳೆದ 10-15 ವರ್ಷಗಳಿಂದ ಆರೋಪಿ ನನಗೆ ಪರಿಚಯದವನು ಇರುತ್ತಾನೆ. ಆರೋಪಿ 5 ನೇ ತರಗತಿವರೆಗೆ ಮಾತ್ರ ಶಾಲೆ ಕಲಿತಿರುತ್ತಾನೆ ಎಂದರೆ ಸಾಕ್ಷಿಯು ಆರೋಪಿ ಯಾವುದೇ ಶಾಲೆ ಕಲಿತಿಲ್ಲಾ ಎಂದು ನುಡಿಯುತ್ತಾರೆ. ಆರೋಪಿ ಶಾಲೆ ಬಿಟ್ಟಾದ ನಂತರ ಗೋಕಾಕಿನ ಎಸ್.ಕೆ.ಜಾಧವ ರವರ ರೇಷನ್ ಅಂಗಡಿಯಲ್ಲಿ ರೇಷನ್ ತೂಕ ಮಾಡುವ ಕೆಲಸಕ್ಕೆ ಸೇರಿಕೊಂಡಿದ್ದ ಎಂದರೆ ಸರಿ. ಅದರಂತೆ ಆರೋಪಿಯು ಅಟೋ ರಿಕ್ಷಾ ಚಾಲಕನೆಂದು ಕೆಲಸ ಮಾಡುತ್ತಿದ್ದ ಎಂದರೆ ಸರಿ. ಸದರಿ ಅಟೋ ರಿಕ್ಷಾ ಮತ್ತು ರೇಷನ್ ಅಂಗಡಿಯಲ್ಲಿ ತೂಕ ಮಾಡುವ ಕೆಲಸವನ್ನು ಬಿಟ್ಟು ಆರೋಪಿ ಬೇರಾವುದೇ ಕೆಲಸ ಮಾಡುತ್ತಿರಲಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತ: ಮುಂದುವರೆದು ಬಯೋ ಡಿಜೈಲ್ ಸಪ್ಲೈ ಮಾಡುವ ಕೆಲಸವನ್ನು ಮಾಡುತ್ತಿದ್ದ ಎಂದು ನುಡಿಯುತ್ತಾರೆ. ನಾನು ಸದರಿ ಸಂಗತಿಯನ್ನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

17) ಆರೋಪಿ ನನಗೆ ಕಳೆದ 6-7 ವರ್ಷಗಳಿಂದ ಮಾತ್ರ ಪರಿಚಯಸ್ಥನಾಗಿರುತ್ತಾನೆ ಎಂದರೆ ಸರಿಯಲ್ಲ. ನಾನು ಬೇರೆಯವರಿಗೆ ಬಡ್ಡಿಯ ಹಾಗೆ ಹಣ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ನಾನು ಬೇರೆಯವರ ಕಡೆಯಿಂದ ಕಡಿಮೆ ಬಡ್ಡಿಯಿಂದ ಹಣ ಪಡೆದುಕೊಂಡು ನನಗೆ ಹಣ ಬೇಡಿದ ವ್ಯಕ್ತಿಗಳಿಗೆ ಹೆಚ್ಚಿನ ಬಡ್ಡಿಗಾಗಿ ಹಣ ನೀಡುವ ಉದ್ಯೋಗವನ್ನು ಸಹ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

18) ಡಿಸೆಂಬರ್ 2019 ರ 2 ನೇ ವಾರದಲ್ಲಿ ಆರೋಪಿ ತನಗೆ ಹಣದ ಅವಶ್ಯಕತೆ ಇದೆ ಎಂದು ರೂ.50,000/- ಹಣ ಕೇಳಲು ನನ್ನ ಬಳಿ ಬಂದಿದ್ದ ಎಂದರೆ ಸಾಕ್ಷಿಯು ಉದ್ಯೋಗದ ಸಲುವಾಗಿ ರೂ.50,000/- ಹಣ ಕೇಳಿದ್ದ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ರೂ.100/- ಕ್ಕೆ ತಿಂಗಳಿಗೆ 10% ರ ಬಡ್ಡಿ ಆಧಾರದ ಮೇಲೆ ರೂ.50,000/- ಹಣ ನೀಡಿದ್ದೆ ಎಂದರೆ ಸಾಕ್ಷಿಯು ನಾನು ಬಡ್ಡಿ ಆಧಾರದ ಮೇಲೆ ಹಣ ನೀಡಿಲ್ಲ, ಬಡ್ಡಿ ಇಲ್ಲದೇ ಕೈಗಡ ಹಣವನ್ನು ದಿ:10.06.2021 ರಂದು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗೆ ನಾನು ನನ್ನ ಮನೆಯಲ್ಲಿ ರೂ.50,000/- ಹಣವನ್ನು ನೀಡಿರುತ್ತೇನೆ. ಡಿಸೆಂಬರ್ 2019 ರ 2 ನೇ ವಾರದಲ್ಲಿ ನಾನು ಆರೋಪಿಗೆ ರೂ.50,000/- ಹಣ ನೀಡುವ ಸಮಯದಲ್ಲಿ ಆರೋಪಿಯ ಕಡೆಯಿಂದ ಭದ್ರತೆಗಾಗಿ ನಿಪಿ.1 ರ ಖಾಲಿ ಚೆಕ್ಕಿನ ಮೇಲೆ ಹಾಗೂ ಆರೋಪಿಯ ಖಾತೆಗೆ ಸೇರಿ ಇನ್ನೊಂದು ಚೆಕ್ಕ ನಂ:109011 ರ ಮೇಲೆ ಚೆಕ್ಕಿನ ಮೇಲೆ ಸಹಿ ಪಡೆದುಕೊಂಡು ಹಣ ನೀಡಿದ್ದೆ ಎಂದರೆ ಸರಿಯಲ್ಲ.

19) 2019 ರ ಡಿಸೆಂಬರ್ 2 ನೇ ವಾರದಲ್ಲಿ ಆರೋಪಿ ನನ್ನಿಂದ ಪಡೆದ ರೂ.50,000/- ಹಣಕ್ಕೆ ಪ್ರತಿ ತಿಂಗಳು ಬಡ್ಡಿ ಕಟ್ಟುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ಕೊನೆಯದಾಗಿ ಮಾರ್ಚ್ 2020 ರ 2 ನೇ ವಾರದಲ್ಲಿ ಅಸಲು ಮತ್ತು ಬಡ್ಡಿ ಹಣವನ್ನು ಸಂಪೂರ್ಣವಾಗಿ ಆರೋಪಿ ನನಗೆ ನೀಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ಅಸಲು ಮತ್ತು ಬಡ್ಡಿ ಹಣವನ್ನು ನನಗೆ ನೀಡಿದಾದ ನಂತರ ಆರೋಪಿಯಿಂದ ಪಡೆದ ಎರಡು ಖಾಲಿ ಚೆಕ್ಕುಗಳನ್ನು ಮರಳಿ ಕೊಡಲು ಕೇಳಿದ್ದ ಎಂದರೆ ಸರಿಯಲ್ಲ. ನಾನು ಹುಡುಕಾಡಿ ನಾಳೆ ಕೊಡುತ್ತೇನೆ ಎಂದು ತಿಳಿಸಿದ್ದೆ ಎಂದರೆ ಸರಿಯಲ್ಲ. ಸದರಿ ಅವಧಿಯಲ್ಲಿ ಕೋವಿಡ್-19 ಮಹಾಮಾರಿ ಕಾಯಿಲೆ ದೇಶವ್ಯಾಪ್ತಿ ಹರಡಿತ್ತು ಎಂದರೆ ಸರಿಯಲ್ಲ. ಹೀಗಾಗಿ ಆರೋಪಿ ನನಗೆ ಬೇಟ್ಟಿಯಾಗಿ ಚೆಕ್ಕುಗಳನ್ನು ಮರಳಿ ಕೇಳಿರಲಿಲ್ಲ ಎಂದರೆ ಸರಿಯಲ್ಲ. ತದನಂತರ ಆರೋಪಿ ನನಗೆ ಆರೋಪಿಯಿಂದ ಪಡೆದುಕೊಂಡ ಎರಡು ಚೆಕ್ಕುಗಳನ್ನು ಅನೇಕ ಸಲ ಕೇಳಿದರೂ ಸಹ ನಾನು ಇಂದು ಕೊಡುತ್ತೇನೆ, ನಾಳೆ ಕೊಡುತ್ತೇನೆ ಎನ್ನುತ್ತಾ ಮುಂದೂಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.

20) ತದನಂತರ ನಾನು ಈ ದೂರನ್ನು ಸಲ್ಲಿಸುವ ಪೂರ್ವದಲ್ಲಿ ಆರೋಪಿಯ ಬಳಿ ಒಂದು ಖಾಲಿ ಛಾಪಾ ಕಾಗದ ತೆಗೆದುಕೊಂಡು ಹೋಗಿ ಅದರ ಮೇಲೆ ಸಹಿ ಮಾಡಿಕೊಟ್ಟರೆ ಚೆಕ್ಕುಗಳನ್ನು ಮರಳಿ ಕೊಡುತ್ತೇನೆ ಎಂದು ತಿಳಿಸಿದ್ದೆ ಎಂದರೆ ಸರಿಯಲ್ಲ. ಆರೋಪಿ ಖಾಲಿ

ಛಾಪಾ ಕಾಗದದ ಮೇಲೆ ಸಹಿ ಮಾಡುವುದಿಲ್ಲ ಎಂದು ತಿಳಿಸಿದಾಗ ನಾನು ಚೆಕ್ಕುಗಳನ್ನು ಮರಳಿ ಕೊಡುತ್ತೇನೆ ಅದಕ್ಕೆ ಆಧಾರವೆಂದು ಛಾಪಾ ಕಾಗದದ ಮೇಲೆ ಸಹಿ ಮಾಡಲು ತಿಳಿಸಿ ಸಹಿ ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ ಖಾಲಿ ಛಾಪಾ ಕಾಗದದ ಮೇಲೆ ಸಹಿ ಮಾಡಿ ಪಡೆದುಕೊಂಡ ದಾಖಲೆಯೇ ನಿಪಿ.6 ರ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.6 ರ ಖಾಲಿ ಛಾಪಾ ಕಾಗದದ ಮೇಲೆ ನನಗೆ ಬೇಕಾದಹಾಗೆ ನಾನು ಬೆರಳಚ್ಚು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.6 ರ ಛಾಪಾ ಕಾಗದವನ್ನು ನಾನೇ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತ: ಮುಂದುವರೆದು ಆರೋಪಿಯೇ ನನ್ನ ಹೆಸರಿನ ಮೇಲೆ ನಿಪಿ.6 ರ ಛಾಪಾ ಕಾಗದವನ್ನು ಖರೀದಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ.

21) ನಿಪಿ.6 ರ ಛಾಪಾ ಕಾಗದದ 2 ನೇ ಪುಟದಲ್ಲಿ ಸಾಕ್ಷಿದಾರರ ಸಹಿ ಮತ್ತು ಅವರ ಹೆಸರುಗಳು ಬೆರಳಚ್ಚು ಇರುತ್ತದೆ ಎಂದರೆ ಸರಿ. ಸದರಿ ಸಾಕ್ಷಿದಾರರು ತಮ್ಮ ಹೆಸರಿನ ಮೇಲೆ ಸರಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ.6 ರ ದಾಖಲೆಯಲ್ಲಿ "ಇಂತಿ ತಮ್ಮ ವಿಶ್ವಾಸಿ" ಎಂದು ಬೆರಳಚ್ಚು ಮಾಡಿಸಿದ ಕೆಳಗಡೆಯಾಗಲಿ ಮೇಲುಗಡೆಯಾಗಲಿ ಯಾರದೇ ಹೆಸರು ಬೆರಳಚ್ಚು ಮಾಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತ: ಮುಂದುವರೆದು ಆರೋಪಿಯೇ ಆ ರೀತಿ ಬೆರಳಚ್ಚು ಮಾಡಿಸಿರುತ್ತಾನೆ ಎಂದು ನುಡಿಯುತ್ತಾನೆ. "ಇಂತಿ ತಮ್ಮ ವಿಶ್ವಾಸಿ" ಎಂಬ ಸ್ಥಳದ ಮೇಲೆ ಯಾರೂ ಸಹಿ ಮಾಡಿರುವುದಿಲ್ಲ ಸರಿ. ಸಾಕ್ಷಿಯು ಸ್ವತ: ಮುಂದುವರೆದು ಆರೋಪಿ ಕೆಳಗಡೆ ಸಹಿ ಮಾಡಿ ನಡೆಯುತ್ತದೆ ಎಂದು ತಿಳಿಸಿರುತ್ತಾನೆ ಎಂದು ನುಡಿಯುತ್ತಾರೆ. ನಿಪಿ.6 ರ ಛಾಪಾ ಕಾಗದವನ್ನು ನನ್ನ ಹೆಸರಿನಲ್ಲಿ ನಾನೇ ಹಣ ಕೊಟ್ಟು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.6(ಎ) ಮತ್ತು (ಬಿ) ಎಂದು ಸಹಿ ಮಾಡಿದ ಸಾಕ್ಷಿದಾರರು ನನ್ನ ಸಂಬಂಧಿಕರು ಎಂದರೆ ಸರಿ. ಸಾಕ್ಷಿಯು ಸ್ವತ: ಮುಂದುವರೆದು ಸದರಿ ಸಾಕ್ಷಿದಾರರು ಆರೋಪಿಗೂ ಸಹ ಸಂಬಂಧಿಕರಾಗಬೇಕು ಎಂದು ನುಡಿಯುತ್ತಾರೆ. ನಿಪಿ.6 ರ ದಾಖಲೆಯಲ್ಲಿ ನಾನು ಮತ್ತು ಆರೋಪಿ ಒಂದೊಂದು ಪಕ್ಷಗಾರರು ಎಂದು ಉಲ್ಲೇಖ ಇರುತ್ತದೆ ಎಂದರೆ ಸರಿ. ಸದರಿ ನಿಪಿ.6 ರ ದಾಖಲೆಯ ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ.

22) ನಾನು ಈ ಪ್ರಕರಣದಲ್ಲಿ ನನ್ನ ಬ್ಯಾಂಕಿನ ಸ್ಟೇಟಮೆಂಟನ್ನು ಹಾಜರಪಡಿಸಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಆರೋಪಿಯ ಸಹಿಯನ್ನು ಛಾಪಾ

ಕಾಗದದ ಮೇಲೆ ಪಡೆದುಕೊಂಡು ನಿಪಿ.6 ರಂತೆ ದಾಖಲೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ 2019 ರ ಡಿಸೆಂಬರ್ 2 ನೇ ವಾರದಲ್ಲಿ ಭದ್ರತೆಗಾಗಿ ಪಡೆದುಕೊಂಡ 2 ಚೆಕ್ಕುಗಳಲ್ಲಿನ ಒಂದು ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ತಿಳಿಸಿದಂತೆ ಆರೋಪಿಗೆ ನಾನು ರೂ.5,00,000/-ದವರೆಗೆ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

ದಿನಾಂಕಃ **27-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟಿ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಎಮ್.ಎ.ಎಚ್ ಅವರಿಂದ:</u>**

1) ನಾನು ನನ್ನ ದೂರಿನ ಶಿರ್ಷಿಕೆಯಲ್ಲಿ ತಿಳಿಸಿದ ವಿಳಾಸದಲ್ಲಿ ಕಳೆದ 15 ವರ್ಷಗಳಿಂದ ವಾಸವಾಗಿರುತ್ತೇನೆ. ನಾನು ಅದಕ್ಕಿಂತ ಮೊದಲು ಗೋಕಾಕಿನ ಮಾಲದಾರ ಗಲ್ಲಿಯಲ್ಲಿ ವಾಸವಾಗಿದ್ದೆ. ಮಾಲದಾರ ಗಲ್ಲಿಯಲ್ಲಿರುವ ಮನೆಯನ್ನು ನಾವು ಮಾರಾಟ ಮಾಡಿದ್ದಕ್ಕಾಗಿ ಈಗ ಜಾಧವ ಪೆಟ್ರೋಲ್ ಪಂಪ್ ಫಾಲ್ಸ್ ರೋಡ್ ಗೋಕಾಕದಲ್ಲಿ ವಾಸವಾಗಿರುತ್ತೇನೆ. ನಾನು ಬಿ.ಸಿ.ಎ ಪದವಿಯನ್ನು ಜುಲೈ-2020 ರಲ್ಲಿ ಶೂನ್ಯ ಸಂಪಾಧನ ಮಠ ಗೋಕಾಕದಲ್ಲಿ ಪೂರ್ಣಗೊಳಿಸಿರುತ್ತೇನೆ. ಕಾಲೇಜಿನ ಸಮಯ ಬೆಳಗಿನ 9.30 ರಿಂದ ಮದ್ಯಾಹ್ನ 3.00 ರ ವರೆಗೆ ಇತ್ತು.

2) ನಾನು ಮಾಲದಾರ ಗಲ್ಲಿಯ ಎಸ್.ಎಸ್. ಆನಲೈನ್ ಸೆಂಟರ್ ನಲ್ಲಿ ಅರೇಕಾಲಿಕ ಕೆಲಸಗಾರನೆಂದು ಆಧಾರ ಕಾರ್ಡ್, ಪಾಸ್ ಪೋರ್ಟ್, ನೌಕರಿ ಅರ್ಜಿ ಹಾಕುವ ಕೆಲಸವನ್ನು ಮಾಡುತ್ತಿದ್ದೆ. ಸದರಿ ಆನಲೈನ್ ಸೆಂಟರಿನ ಮಾಲೀಕರ ಹೆಸರು ಸರ್ಫರಾಜ ಶಾಹಬಾಜಖಾನ

ಇತ್ತು. ಸದರಿ ಆನಲೈನ್ ಸೆಂಟರಿನಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಅರೇಕಾಲಿಕ ಕೆಲಸಗಾರರು ಇರಲಿಲ್ಲ. ನನ್ನ ಕಾಲೇಜು ಮುಗಿದಾದ ನಂತರ ನಾನು ಆನಲೈನ್ ಸೆಂಟರಿಗೆ ಕೆಲಸ ಮಾಡಲು ಹೋಗುತ್ತಿದ್ದೆ. ನನಗೆ ಪ್ರತಿ ತಿಂಗಳು ರೂ.10,000/- ಸಂಬಳವನ್ನು ಆನಲೈನ್ ಸೆಂಟರಿನ ಮಾಲೀಕರು ನಗದಾಗಿ ನೀಡುತ್ತಿದ್ದರು.

3) ನಾನು ದೂರಿನಲ್ಲಿ ಎರಟೇಲ್ ಪೆಮೆಂಟ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಸಹ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ಎರಟೇಲ್ ಪೆಮೆಂಟ್ ಬ್ಯಾಂಕು ಗೋಕಾಕಿನ ಗುರುವಾರ ಪೇಠಿನ ಅನಮೋಲ್ ಹೊಟೇಲ್ ಹತ್ತಿರ ಇರುತ್ತದೆ. ನಾನು ಸದರಿ ಎರಟೇಲ್ ಪೆಮೆಂಟ್ ಬ್ಯಾಂಕಿನಲ್ಲಿ ಬೆಳಗಾವಿ ಜಿಲ್ಲೆಯ ಟೀಮ್ ಲೀಡರ್ ಎಂದು ಕೆಲಸ ಮಾಡುತ್ತಿದ್ದೆ. ಟೀಮ್ ಲೀಡರ್ ಕೆಲಸ ಏನು ಎಂದರೆ ಎಲ್ಲಾ ತಾಲೂಕುಗಳ ಶಾಖೆಯ ಅಕೌಂಟ್ ಓಪನಿಂಗ್, ವಿಮೆ, ಸಾಲ ಕಟ್ಟಿಸಿಕೊಳ್ಳುವುದು, ಆರೋಗ್ಯ ವಿಮೆ, ವಾಹನ ವಿಮೆ ಮಾಡಿಸುವ ಕೆಲಸವಾಗಿರುತ್ತದೆ. ನಾನು ಕಛೇರಿಯಲ್ಲಿ ಕುಳಿತು ಮತ್ತು ಸ್ಥಳಕ್ಕೂ ಹೋಗಿ ಕೆಲಸಗಾರರಿಂದ ಕೆಲಸ ಮಾಡಿಸುತ್ತಿದ್ದೆ. ಸದರಿ ಕೆಲಸದ ಅವಧಿ ಬೆಳಿಗ್ಗೆ 9.30 ರಿಂದ ಸಾಯಂಕಾಲ 6.00 ಗಂಟೆಯವರೆಗೆ ಇತ್ತು. ನನಗೆ ಪ್ರತಿ ತಿಂಗಳು ಎರಟೇಲ್ ಪೆಮೆಂಟ್ ಬ್ಯಾಂಕಿನಿಂದ ರೂ.45,000/- ಸಂಬಳ ನೀಡುತ್ತಿದ್ದರು. ಸದರಿ ಸಂಬಳವನ್ನು ನನ್ನ ಎರಟೇಲ್ ಪೆಮೆಂಟ್ ಬ್ಯಾಂಕಿನ ಖಾತೆಗೆ ಜಮೆ ಮಾಡುತ್ತಿದ್ದರು.

4) ನಾನು 18.07.2020 ರಂದು ಎರಟೇಲ್ ಪೆಮೆಂಟ್ ಬ್ಯಾಂಕಿನಲ್ಲಿ ಟೀಮ್ ಲೀಡರ್ ಆಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಾನು ಪದವಿ ಮುಗಿದ 5-6 ತಿಂಗಳ ಒಳಗಾಗಿ ಎರಟೇಲ್ ಪೆಮೆಂಟ್ ಬ್ಯಾಂಕಿನ ಸಂದರ್ಶನಕ್ಕೆ ಹೋಗಿದ್ದೆ. ನಾನು ಈ ಪ್ರಕರಣದಲ್ಲಿ ಆನಲೈನ್ ಸೆಂಟರನಲ್ಲಿ ಕೆಲಸ ಮಾಡಿರುವ ಕುರಿತು ಮತ್ತು ಎರಟೇಲ್ ಪೆಮೆಂಟ್ ಬ್ಯಾಂಕಿನಲ್ಲಿ ಕೆಲಸ ಮಾಡಿರುವ ಕುರಿತು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ.

5) ನಾನು ಆಧಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ನಾನು ನನ್ನ ದೂರಿನಲ್ಲಿ ಆರೋಪಿಯ ಪರಿಚಯ ನನಗೆ 26 ವರ್ಷಗಳಿಂದಲೂ ಇರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಆರೋಪಿ ಬಯೋ ಡಿಜೈಲ್ ಸರಬರಾಜು ಮಾಡುವ ಕೆಲಸ ಮಾಡುತ್ತಾನೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಬಯೋ ಡಿಜೈಲ್ ಎಂದರೆ ಏನು ಎನ್ನುವ ಪ್ರಶ್ನೆಗೆ ಸಾಕ್ಷಿಯು ಬಯೋ ಡಿಜೈಲನ್ನು ಜನರೇಟರಗಳಿಗೆ ಕೈಗಾರಿಕಾ ಉದ್ಯಮದಲ್ಲಿ ಉಪಯೋಗ

ಮಾಡುತ್ತಿದ್ದು ಅಂತಹ ಕೈಗಾರಿಕೆ ಉದ್ಯಮದಲ್ಲಿ ಆರೋಪಿ ಬಯೋ ಡಿಜೈಲನ್ನು ಸರಬರಾಜು ಮಾಡುತ್ತಿದ್ದ. ಆರೋಪಿ ಬಯೋ ಡಿಜೈಲ್ ಸರಬರಾಜನ್ನು ಕಳೆದ 15 ವರ್ಷಗಳಿಂದ ಮಾಡುತ್ತಿರುವುದು ನನಗೆ ಗೊತ್ತಿರುತ್ತದೆ. ಅಂತಹ ಬಯೋ ಡಿಜೈಲನ್ನು ಆರೋಪಿ ಪ್ರತಿ ದಿನ ಎಷ್ಟು ಸರಬರಾಜು ಮಾಡುತ್ತಿದ್ದ ಎಂಬುವುದು ನನಗೆ ಗೊತ್ತಿಲ್ಲ. ಆರೋಪಿ ಬಯೋ ಡಿಜೈಲನ್ನು ಎಲ್ಲಿಂದ, ಹೇಗೆ ತರಿಸುತ್ತಿದ್ದ ಎಂಬುವುದು ನನಗೆ ಗೊತ್ತಿಲ್ಲ. ಆರೋಪಿಯ ಬಳಿ ಬಯೋ ಡಿಜೈಲನ್ನು ಸರಬರಾಜು ಮಾಡಲು ಪರವಾನಿಗೆ ಇರುವ ಕುರಿತು ನನಗೆ ಗೊತ್ತಿಲ್ಲ. ಬಯೋ ಡಿಜೈಲನ್ನು ಆರೋಪಿ ಎಲ್ಲಿ, ಹೇಗೆ ಶೇಖರಣೆ ಮಾಡುತ್ತಿದ್ದ ಎಂಬುವುದು ನನಗೆ ಗೊತ್ತಿಲ್ಲ.

6) ದೂರಿನಲ್ಲಿ ಜೂನ್-2021 ರಲ್ಲಿ ಆರೋಪಿ ನನಗೆ ರೂ.50,000/- ಹಣ ಕೇಳಿದ್ದ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಿಖರವಾಗಿ ಯಾವ ದಿನಾಂಕದಂದು ಆರೋಪಿ ರೂ.50,000/- ಸಾಲವನ್ನು ಕೇಳಿದ್ದ ಎಂದರೆ ಸಾಕ್ಷಿಯು ದಿ:10.06.2021 ರಂದು ರೂ.50,000/- ಕೇಳಿದ್ದ ಎಂದು ನುಡಿಯುತ್ತಾರೆ. ಸದರಿ ದಿನದಂದೆ ನಾನು ಆರೋಪಿಗೆ ರೂ.50,000/- ಹಣವನ್ನು ನೀಡಿದ್ದೆ. ಆರೋಪಿಗೆ ನಾನು ಹಣ ನೀಡುವಾಗ ಯಾವುದೇ ದಾಖಲೆಗಳನ್ನು ಬರೆಸಿಕೊಂಡಿರುವುದಿಲ್ಲ. ಏಕೆಂದರೆ ಆರೋಪಿ ನನ್ನ ಆತ್ಮೀಯ ಸ್ನೇಹಿತನಾಗಿದ್ದ ಮತ್ತು ಒಂದೇ ಕುಟುಂಬದಂತೆ ಇರುವುದರಿಂದ ಯಾವುದೇ ದಾಖಲೆಗಳನ್ನು ಬರೆಸಿಕೊಳ್ಳದೇ ಹಣ ನೀಡಿರುತ್ತೇನೆ.

7) ನಾನು ದೂರಿನ ಖಂಡಿಕೆ 3 ಆದ ನಂತರ ಉಪಖಂಡಿಕೆಯಲ್ಲಿ ಆರೋಪಿ ನನ್ನಿಂದ ಸುಮಾರು ರೂ.5,00,000/- ದಷ್ಟು ಹಣವನ್ನು ಬೇಡಿ ಪಡೆದುಕೊಂಡಿರುತ್ತಾನೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿ ಆಗಾಗ ನನ್ನಿಂದ ಹಣ ಪಡೆದುಕೊಳ್ಳುತ್ತಿದ್ದ ಅದು ರೂ.5,00,000/- ದವರೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ದಿ:10.06.2021 ರ ನಂತರ ಯಾವ ಯಾವ ದಿನಾಂಕದಂದು ಆರೋಪಿಗೆ ಎಷ್ಟೆಷ್ಟು ಹಣ ನೀಡಿರುತ್ತೀರಿ? ಎನ್ನುವ ಪ್ರಶ್ನೆಗೆ ಸಾಕ್ಷಿಯು ದಿನಾಂಕ ನೆನಪಿಲ್ಲ, ಆದರೆ ಆರೋಪಿ ನನ್ನಿಂದ ಆಗಾಗ ಹಣ ಪಡೆದುಕೊಳ್ಳುತ್ತಿದ್ದ ಮತ್ತು ಮರಳಿ ನೀಡುತ್ತಿದ್ದ ಎಂದು ನುಡಿಯುತ್ತಾರೆ. ಆರೋಪಿಗೆ ಚೆಕ್ಕಿನ ಮುಖಾಂತರವಾಗಲಿ, ಡಿ.ಡಿ ಮುಖಾಂತರವಾಗಲಿ ಅಥವಾ ಆರ್.ಟಿ.ಜಿ.ಎಸ್. ಮುಖಾಂತರ ವಾಗಲಿ ಹಣ ನೀಡಲು ನಿಮಗೆ ಏನಾದರೂ ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು

ಆರೋಪಿ ಆಗಾಗ ನನ್ನ ಬಳಿ ಬಂದು ನನ್ನ ಬಳಿ ಇರುವ ರೂ.20,000/-, ರೂ.30,000/- ರೂ.40,000/- ಹಾಗೂ ರೂ.70,000/- ಗಳಂತೆ ಹಣ ಪಡೆದುಕೊಳ್ಳುತ್ತಿದ್ದ ಎಂದು ನುಡಿಯುತ್ತಾರೆ. ಆರೋಪಿಗೆ ಯಾವ ಯಾವ ದಿನಾಂಕದಂದು ಎಷ್ಟೆಷ್ಟು ಹಣ ನೀಡಿರುತ್ತೇನೆ ಎಂದು ದಾಖಲೆಯಲ್ಲಿ ಬರೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆರೋಪಿಯ ಮೇಲೆ ನನಗೆ ಅತೀವ ವಿಶ್ವಾಸವಿರುವುದರಿಂದ ದಿನಾಂಕ ಬರೆದುಕೊಳ್ಳದೇ ಹಣವನ್ನು ನೀಡುತ್ತಿದ್ದೆ ಎಂದು ನುಡಿಯುತ್ತಾರೆ.

8) ಆರೋಪಿ ಮೊದಲ ಭಾರಿಗೆ ನನ್ನಿಂದ ದಿ:10.06.2021 ರಂದು ರೂ.50,000/- ಪಡೆದುಕೊಂಡಾದ ನಂತರ ಪುನ: ಸಾಲ ಕೆಳಲು ಬಂದಾಗ ಮೊದಲಿನ ಹಣ ನೀಡು, ನಂತರ ಸಾಲದ ಹಣ ಕೊಡುತ್ತೇನೆ ಎಂದು ಹೇಳಲು ನಿಮಗೆ ಏನು ತೊಂದರೆ ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿ ನನ್ನಿಂದ ಪಡೆದ ಸಾಲದ ಹಣವನ್ನು ಆಗಾಗ ಮರಳಿ ಕೊಡುತ್ತಿದ್ದ ಮತ್ತು ಮತ್ತೆ ಸಾಲ ಪಡೆದುಕೊಳ್ಳುತ್ತಿದ್ದ ಎಂದು ನುಡಿಯುತ್ತಾರೆ.

9) ನೋಟಿಸಿನಲ್ಲಾಗಲಿ, ದೂರಿನಲ್ಲಾಗಲಿ ಮತ್ತು ನನ್ನ ಸ್ವ ಇಚ್ಛಾಹೇಳಿಕೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಆರೋಪಿ ನನ್ನಿಂದ ಅಂದಾಜು ರೂ.5,00,000/- ವರೆಗೆ ಸಾಲ ಪಡೆದುಕೊಂಡಿರುತ್ತಾನೆ ಎಂದು ಮಾತ್ರ ಬರೆಸಿರುತ್ತೇನೆ ಎಂದೆರ ಸರಿಯಲ್ಲ. ನಿರ್ದಿಷ್ಟವಾಗಿ ಯಾವ ದಿನಾಂಕದಂದು ಎಷ್ಟೆಷ್ಟು ಹಣ ನೀಡಿರುತ್ತೇನೆಂದು ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ನಿಖರವಾಗಿ ದಿನಾಂಕ ಗೊತ್ತಿಲ್ಲದ ಕಾರಣ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಕುಟುಂಬದ ಸದಸ್ಯರ ಸಮಕ್ಷಮ ಆರೋಪಿಗೆ ಹಣ ನೀಡಿರುತ್ತೇನೆಂದು ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಆರೋಪಿಯ ಕುಟುಂಬದ ಸದಸ್ಯರ ಹೆಸರು ಬರೆಸಿರುವುದಿಲ್ಲ ಎಂದರೆ ಸರಿ.

10) ನಾನು ಆನಲೈನ್ ಸೆಂಟರದಲ್ಲಿ ಕೆಲಸ ಮಾಡಿದ ಸಂಬಳದ ಹಣ ಮತ್ತು ಏರಟೇಲ್ ಪೆಮೆಂಟ್ ಬ್ಯಾಂಕಿನಲ್ಲಿ ಕೆಲಸ ಮಾಡಿದ ಸಂಬಳದ ಹಣದಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ. ಸದರಿ ಸಂಗತಿಯನ್ನು ನಾನು ನನ್ನ ದೂರಿನಲ್ಲಿ, ನೋಟಿಸಿನಲ್ಲಿ ಮತ್ತು ಸ್ವ ಇಚ್ಛಾ ಹೇಳಿಕೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ.

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡುಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.